# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | **64** |
| ಸದಸ್ಯರ ಹೆಸರು | ಡಾ: ತಳವಾರ್ ಸಾಬಣ್ಣ<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 04.07.2023 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿ ಜಿಲ್ಲೆಯಲ್ಲಿ ಕಲ್ಲುಪುಡಿ ಮಾಡುವ (Stone Crusher Units) ಘಟಕಗಳು ಕರ್ನಾಟಕ ಸರ್ಕಾರದ ಕಾಯ್ದೆ 2011ರ ಮಾರ್ಗಸೂಚಿಗಳನ್ನು ಉಲ್ಲಂಘಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುತ್ತದೆ. |
| ಆ) | ಜಿಲ್ಲೆಯಲ್ಲಿನ ಅಧಿಕಾರಿಗಳು ಕಲ್ಲುಪುಡಿ ಮಾಡುವ ಘಟಕಗಳಿಗೆ ಲೈಸೆನ್ಸ್ ನೀಡುವಾಗ ವಿಚಾರಣೆ ಮಾಡುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ವರದಿಯಾಗಿರುವುದು ನಿಜವೇ; ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; | ಇಲ್ಲ.<br>ಬೆಳಗಾವಿ ಜಿಲ್ಲೆಯಲ್ಲಿ ಸ್ಟೋನ್ ಕ್ರಷರ್ ಘಟಕಗಳ ಲೈಸೆನ್ಸ್ ಮಂಜೂರಾತಿಗೆ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ, 2011 ಹಾಗೂ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ನಿಯಮಗಳು, 2012 ರಂತೆ ಕಂದಾಯ, ಅರಣ್ಯ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಕ್ರಷರ್ ಪರವಾನಗಿ ಕೋರಿ ಸಲ್ಲಿಸಿರುವ ಅರ್ಜಿತ ಪ್ರದೇಶವನ್ನು ಜಂಟಿ ಸ್ಥಳ ಪರಿಶೀಲನೆ ನಡೆಸಿ ನಂತರ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರದಲ್ಲಿ ಮಂಡಿಸಿ, ಅರ್ಜಿತ ಪ್ರದೇಶದಲ್ಲಿ ಕಲಂ-6ರ ಷರತ್ತುಗಳು ಪೂರೈಕೆಯಾದಲ್ಲಿ, ಪ್ರಾಧಿಕಾರದಿಂದ ಕ್ರಷರ್ ಸುರಕ್ಷಿತ ವಲಯವೆಂದು ಘೋಷಿಸಿ ಅಧಿಸೂಚನೆ ಹೊರಡಿಸಿದ ನಂತರ ಕ್ರಷರ್ ಸುರಕ್ಷತಾ ವಲಯ ಪಾಲನಾ ಪ್ರಮಾಣ ಪತ್ರವನ್ನು (ಫಾರಂ-ಬಿ1) ನೀಡಲಾಗುತ್ತಿದೆ. |

<table>
<tr><td></td><td></td><td>ಅರ್ಜಿದಾರರು, ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ Consent of Establishment (CFE) ಹಾಗೂ Consent for Operation (CFO) ಪಡೆದು ಹಾಜರುಪಡಿಸಿದ ನಂತರ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರದಿಂದ ಕ್ರಷರ್ ಲೈಸೆನ್ಸ್ (ಫಾರಂ-ಸಿ) ನ್ನು ಮಂಜೂರು ಮಾಡಲಾಗುತ್ತಿದೆ.</td></tr>
<tr><td>ಇ)</td><td>ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಮತ್ತು ಇತರೆ ಅಧಿಕಾರಿ ಗಳನ್ನೊಳಗೊಂಡ ಜಿಲ್ಲಾ ಸಮಿತಿ ನಿಯಮದಂತೆ ಪ್ರತಿ ತಿಂಗಳು ಸಭೆ ನಡೆಸದಿರಲು ಕಾರಣಗಳೇನು;</td><td>2022-23ನೇ ಸಾಲಿನಲ್ಲಿ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ, 2011 ರಂತೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರವು ಈ ಕೆಳಕಂಡ ದಿನಾಂಕಗಳಂದು ಸಭೆಯನ್ನು ನಡೆಸಿರುತ್ತದೆ.
<table>
<tr><th>ಕ್ರ.ಸಂ.</th><th>ಸಭೆ ಜರುಗಿದ ದಿನಾಂಕ</th></tr>
<tr><td>1.</td><td>18-04-2022</td></tr>
<tr><td>2.</td><td>07-07-2022</td></tr>
<tr><td>3.</td><td>08-08-2022</td></tr>
<tr><td>4.</td><td>04-11-2022</td></tr>
<tr><td>5.</td><td>28-11-2022</td></tr>
<tr><td>6.</td><td>14-03-2023</td></tr>
</table>
ಬೆಳಗಾವಿಯಲ್ಲಿ ನಡೆಯುವ ವಿಧಾನ ಮಂಡಲದ ಅಧಿವೇಶನ ಮತ್ತು ಚುನಾವಣಾ ಅವಧಿಯಲ್ಲಿ ಸಭೆಗಳನ್ನು ನಡೆಸಲು ಸಾಧ್ಯವಾಗಿರುವುದಿಲ್ಲ.</td></tr>
<tr><td>ಈ)</td><td>ಅಧಿಕಾರಿಗಳು ಜಿಲ್ಲೆಯಲ್ಲಿನ 267 ಘಟಕಗಳಿಗೆ ತೆರಳಿ ತಪಾಸಣೆ ಮಾಡಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳದಿರಲು ಕಾರಣಗಳೇನು? (ವಿವರ ನೀಡುವುದು)</td><td>ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ, 2011 ರಂತೆ ಸ್ಟೋನ್ ಕ್ರಷರ್ ಘಟಕಗಳನ್ನು ನಿಯಮಿತವಾಗಿ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳಿಂದ ತಪಾಸಣೆ ನಡೆಸಲಾಗುತ್ತಿದೆ.<br><br>2021-22ನೇ ಸಾಲಿನಲ್ಲಿ ಸ್ಟೋನ್ ಕ್ರಷರ್ ಲೈಸೆನ್ಸ್ ಷರತ್ತುಗಳನ್ನು ಪಾಲನೆ ಮಾಡಿರುವ ಬಗ್ಗೆ ದಿನಾಂಕ: 03.07.2021 ರಂದು ನಡೆದ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರದ ಸಮಿತಿ ಸಭೆಯ ನಿರ್ಣಯದಂತೆ, ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಪರಿಶೀಲನೆ ಮಾಡಿರುತ್ತಾರೆ.</td></tr>
</table>

...3

ಸ್ಟೋನ್ ಕ್ರಷರ್ ಲೈಸೆನ್ಸ್ ಷರತ್ತುಗಳನ್ನು ಉಲ್ಲಂಘನೆ ಮಾಡಿರುವ ಸ್ಟೋನ್ ಕ್ರಷರ್ ಘಟಕಗಳ ವಿರುದ್ಧ ಕೈಗೊಂಡಿರುವ ಕ್ರಮಗಳ ವಿವರ ಕೆಳಕಂಡಂತಿದೆ:

**(ಮೊತ್ತ ₹ ಗಳಲ್ಲಿ)**

| ಮಂಜೂರು ಮಾಡಿರುವ ಸ್ಟೋನ್ ಕ್ರಷರ್ ಘಟಕಗಳ ಸಂಖ್ಯೆ | ನಿಷ್ಕ್ರಿಯ ಸ್ಟೋನ್ ಕ್ರಷರ್ ಘಟಕಗಳ ಸಂಖ್ಯೆ | ಚಾಲನೆಯಲ್ಲಿದ್ದ ಸ್ಟೋನ್ ಕ್ರಷರ್ ಘಟಕಗಳ ಸಂಖ್ಯೆ | ಲೈಸೆನ್ಸ್ ಷರತ್ತುಗಳನ್ನು ಉಲ್ಲಂಘಿಸಿರುವ ಪ್ರಕರಣಗಳು | ವಿಧಿಸಿದ ದಂಡದ ಮೊತ್ತ | ಸಂಗ್ರಹಿಸಿದ ದಂಡದ ಮೊತ್ತ | ಪಾವತಿಸಲು ಬಾಕಿ ಇರುವ ದಂಡದ ಮೊತ್ತ |
|---|---|---|---|---|---|---|
| 220 | 43 | 177 | 142 | 55,65,000 | 29,55,000 | 26,10,000 |

2022-23ನೇ ಸಾಲಿನಲ್ಲಿ ಸ್ಟೋನ್ ಕ್ರಷರ್ ಲೈಸೆನ್ಸ್ ಷರತ್ತುಗಳನ್ನು ಪಾಲನೆ ಮಾಡಿರುವ ಬಗ್ಗೆ ದಿನಾಂಕ 05.01.2022 ರಂದು ನಡೆದ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರದ ಸಮಿತಿ ಸಭೆಯ ನಿರ್ಣಯದಂತೆ, ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಸ್ಥಳ ಪರಿಶೀಲನೆ ಮಾಡಿರುತ್ತಾರೆ.

ದಿನಾಂಕ 28.08.2014 ರಿಂದ 2022-23ನೇ ಸಾಲಿನ ಅಂತ್ಯಕ್ಕೆ ಜಿಲ್ಲೆಯಲ್ಲಿ 266 ಕ್ರಷರ್ ಘಟಕಗಳಿಗೆ ಲೈಸೆನ್ಸ್ ಮಂಜೂರು ಮಾಡಲಾಗಿರುತ್ತದೆ. ಜಂಟಿ ಸ್ಥಳ ಪರಿಶೀಲನೆಯಂತೆ 239 ಸ್ಟೋನ್ ಕ್ರಷರ್ ಘಟಕಗಳು ಕಾರ್ಯ ನಿರ್ವಹಿಸುತ್ತಿರುತ್ತವೆ.

ಸ್ಟೋನ್ ಕ್ರಷರ್ ಲೈಸೆನ್ಸ್ ಷರತ್ತುಗಳನ್ನು ಉಲ್ಲಂಘನೆ ಮಾಡಿರುವ ಸ್ಟೋನ್ ಕ್ರಷರ್ ಘಟಕಗಳ ವಿರುದ್ಧ ಕೈಗೊಂಡಿರುವ ಕ್ರಮಗಳ ವಿವರ ಕೆಳಕಂಡಂತಿದೆ:

**(ಮೊತ್ತ ₹ ಗಳಲ್ಲಿ)**

| ಮಂಜೂರು ಮಾಡಿರುವ ಸ್ಟೋನ್ ಕ್ರಷರ್ ಘಟಕಗಳ ಸಂಖ್ಯೆ | ನಿಷ್ಕ್ರಿಯ ಸ್ಟೋನ್ ಕ್ರಷರ್ ಘಟಕಗಳ ಸಂಖ್ಯೆ | ಚಾಲನೆಯಲ್ಲಿದ್ದ ಸ್ಟೋನ್ ಕ್ರಷರ್ ಘಟಕಗಳ ಸಂಖ್ಯೆ | ಲೈಸೆನ್ಸ್ ಷರತ್ತುಗಳನ್ನು ಉಲ್ಲಂಘಿಸಿರುವ ಪ್ರಕರಣಗಳು | ವಿಧಿಸಿದ ದಂಡದ ಮೊತ್ತ | ಸಂಗ್ರಹಿಸಿದ ದಂಡದ ಮೊತ್ತ | ಪಾವತಿಸಲು ಬಾಕಿ ಇರುವ ದಂಡದ ಮೊತ್ತ |
|---|---|---|---|---|---|---|
| 239 | 30 | 209 | 107 | 16,60,000 | 4,00,000 | 12,60,000 |

ಸಂಖ್ಯೆ ಸಿಐ -ಎಂಎಂಎನ್/140/2023

(ಎಸ್.ಎಸ್.ಮಲ್ಲಿಕಾರ್ಜುನ)
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.